5. ಇಲ್ಲ.

6. ಈ ಕೆಲಸವನ್ನು ಮಾಡುವ ಕಂಟ್ರಾಕ್ಟರ್ ಹತ್ತಿರ ಈ ಪೈಪುಗಳು ಇವೆ. ಯೋಜನೆಯನ್ನು ಕಾರ್ಯಗತಗೊಳಿಸಲು ಪೂರ್ಣ ಪ್ರಯತ್ನ ಮಾಡಲಾಗುತ್ತಿದೆ. ಹಾಲಿ ಇರುವ 4 ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಸೇಡಂ ತಾಲ್ಲೂಕಿನಲ್ಲಿ ಮುಧೋಳ ಮತ್ತ ಕದಲಾಪುರ ಕೆರೆಯಂಗಳದ ಜಮೀನನ್ನು ಬಿತ್ತಣಿಕೆ ಮಾಡಲು ಲಿಲಾವು.

1084 (1760): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ್ ರಾಮಾಚರವು, ದಯಾಲಚರವು ಹಾಗೂ ಕದಲಾಪುರ ಇನ್ನಿತರ ಕೆರೆಗಳಲ್ಲಿ ಅನಾವೃಷ್ಟಿಯಿಂದ ನೀರು ಬರಲಾದಕ್ಕಾಗಿ ಬೆಳೆ ಬಿತ್ತಣಿಕೆ ಮಾಡಲು ತಹಶೀಲ್ ಕಾರ್ಯಾಲಯದಿಂದ ಲೀಲಾವು (ಹರಾಜು) ಮಾಡಿ 15-20 ಸಾವಿರ ರೂಪಾಯಿ ಹಣ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ. ಕಳೆದ ಅಧಿವೇಶನದಲ್ಲಿ ಕೇಳಿದ ಈ ಪ್ರಶ್ನೆಗೆ ಉತ್ತರಿಸದಿರಲು ಕಾರಣವೇನು ?

ಇ. ಈ ಕೆರೆಗಳಲ್ಲಿ ಬಿತ್ತಣಿಕೆ ಮಾಡಲು ಕೊಟ್ಟಿರುವ ಲೀಲಾವಿನ ಹಣವೆಷ್ಟು ?

ಈ. ಈ ಹಣ ಯಾವ ಶೀರ್ಷಿಕೆಯಲ್ಲಿ ಯಾವ ದಿನಾಂಕದಿಂದ ಜಮಾ ಮಾಡಲಾಗಿದೆ ?

ಉ. ಒಂದು ವೇಳೆ ಜಮಾ ಆಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಅದರ ಜವಾಬ್ದಾರರು ಯಾರು;

ಊ. ಅವರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಮುಧೋಳ್ ಗ್ರಾಮದ ರಾಮಕೇರಿ ಕೆರೆ ಅಂಗಳವನ್ನು ಮಾತ್ರ 2,000 ರೂಪಾಯಿಗಳಿಗೆ ಹರಾಜು ಮಾಡಲಾಗಿದೆ.

ಆ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 860ಕ್ಕೆ ಕಳೆದ ಅಧಿವೇಶನದಲ್ಲಿ (ಈಗಿನ ಸಂಖ್ಯೆ. 1760) ಉತ್ತರಿಸಲು 31.12.1992ಕ್ಕೆ ದಿನಾಂಕ ನಿಗದಿಯಾಗಿತ್ತು. ಈ ಪ್ರಶ್ನೆಗೆ ಉತ್ತರಗಳನ್ನು ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಸಕಾಲದಲ್ಲಿ ಸಲ್ಲಿಸಿಲ್ಲವಾದ್ದರಿಂದ ಒಂದು ವಾರದ ಕಾಲಾವಕಾಶವನ್ನು ಕೋರಲಾಗಿತ್ತು. ತದನಂತರ ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಉತ್ತರಗಳನ್ನು ದಿನಾಂಕ 5.1.1993ರಂದು ಸಲ್ಲಿಸಿದ್ದು, ಇದನ್ನಾಧರಿಸಿ ಸದರಿ ಪ್ರಶ್ನೆಗೆ ಉತ್ತರಗಳನ್ನು ವಿಧಾನಮಂಡಲಕ್ಕೆ ದಿನಾಂಕ 11.2.1993ರಂದು ಕಳುಹಿಸಲಾಗಿದೆ.

ಇ. 2,000 ರೂಪಾಯಿಗಳು.

ಈ. ಹರಾಜು ಮೊಬಲಗಿನ ಕಾಲು ಭಾಗದಷ್ಟು ಅಂದರೆ 500 ರೂಪಾಯಿಗಳನ್ನು ದಿನಾಂಕ 27.11.1992ರಂದು 0029– ಎಲ್‌ಆರ್ – ಅದರ್ ರೆಸೀಪ್ಟ್ಸ್ – ಆಕ್ಷನ್ ಶೀರ್ಷಿಕೆಯಡಿ ಸೇಡಂ ಉಪ ಖಜಾನೆಗೆ ಜಮಾ ಮಾಡಲಾಗಿದೆ.

ಉ. ಉಳಿದ ಹರಾಜು ಮೊಬಲಗನ್ನು ಅಂದರೆ 1,500 ರೂಪಾಯಿಗಳನ್ನು ಖಜಾನೆಗೆ ಜಮಾ ಮಾಡುವಂತೆ ಸಂಬಂಧಿಸಿದ ರಾಜಸ್ವ ನಿರೀಕ್ಷಕರಿಗೆ ಸೂಚಿಸಲಾಗಿದೆ. ಆದುದರಿಂದ, ಯಾರ ಮೇಲೂ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ. ಪ್ರಶ್ನೆ 'ಉ' ಗೆ ಕೊಟ್ಟಿರುವ ಉತ್ತರ ಈ ಪ್ರಶ್ನೆಗೂ ಅನ್ವಯಿಸುತ್ತದೆ.

ಹಾಸನ ವಿಧಾನ ಸಭಾಕ್ಷೇತ್ರಕ್ಕೆ ಕಿರು ನೀರು ಸರಬರಾಜು ಯೋಜನೆಗಳ ಬಗ್ಗೆ.

1085 (578): ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ವಿಧಾನಸಭಾ ಕ್ಷೇತ್ರದ ಕಟ್ಟಾಯ, ಕಸಬ ಮತ್ತು ಶಾಂತಿ ಗ್ರಾಮದ ಹೋಬಳಿಗಳ ಯಾವ ಯಾವ ಊರುಗಳಿಗೆ ಕಿರುನೀರು ಸರಬರಾಜು ಯೋಜನೆಗಳು ಮಂಜೂರಾಗಿವೆ ? (ಮಂಜೂರಾದ ತಾರೀಖುಗಳನ್ನು ತಿಳಿಸುವುದು);

ಆ. ಈ ರೀತಿ ಮಂಜೂರಾದ ಎಷ್ಟು ಕಿರುನೀರು ಸರಬರಾಜು ಯೋಜನೆಗಳ ಕೆಲಸಗಳು ಪೂರ್ಣಗೊಂಡಿವೆ ? (ವಿವರ ನೀಡುವುದು) ?

ಇ. ಈ ರೀತಿ ಪೂರ್ಣಗೊಂಡ •ಕಿರುನೀರು ಸರಬರಾಜು ಯೋಜನೆಗಳು ಯಾವ ಯಾವ ತಾರೀಖಿನಿಂದ ಕೆಟ್ಟು ನಿಂತು ಹೋಗಿವೆ ? (ವಿವರ ನೀಡುವುದು);

ಈ. ಅದಕ್ಕೆ ಕಾರಣಗಳೇನು ?

ಉ. ಮಂಜೂರಾಗಿರುವ ಕಿರುನೀರು ಸರಬರಾಜು ಯೋಜನೆಗಳಲ್ಲಿ ಎಷ್ಟು ಯೋಜನೆಗಳ ಕೆಲಸ ಪೂರ್ಣವಾಗಿಲ್ಲ ? (ವಿವರ ನೀಡುವುದು);

ಊ. ಈ ರೀತಿ ಯೋಜನೆಗಳು ಸಕಾಲದಲ್ಲಿ ಪೂರ್ಣವಾಗದಿರಲು ಕಾರಣಗಳೇನು ? (ವಿವರ ನೀಡುವುದು) ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. 58 ಕಿರು ನೀರು ಸರಬರಾಜು ಯೋಜನೆಗಳು ಮಂಜೂರು ಆಗಿರುತ್ತದೆ.

(ಮಂಜೂರಾದ ವರ್ಷವನ್ನು ಅನುಬಂಧದಲ್ಲಿ ತೋರಿಸಲಾಗಿದೆ.)

ಆ. 42 ಕಿರು ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿವೆ. (ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ)

ಇ. ಪೂರ್ಣಗೊಂಡ ಯೋಜನೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ.

ಈ. ಉದ್ಭವಿಸುವುದಿಲ್ಲ.

ಉ. 16 ಕಿರು ನೀರು ಸರಬರಾಜು ಯೋಜನೆಗಳ ಕೆಲಸಗಳು ಪೂರ್ಣಗೊಂಡಿಲ್ಲ. ಅವುಗಳು ಪ್ರಗತಿಯಲ್ಲಿವೆ. (ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ).

ಊ. ವಿಳಂಬಕ್ಕೆ ಕಾರಣಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.